OS 209/2017
DW-1

ದಿನಾಂಕಃ 19-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎಂ ವಿ ವಕೀಲರಿಂದಃ</u>**

ನಾನು 18 ವರ್ಷಗಳ ಹಿಂದೆ ವಿವಾಹವಾಗಿರುತ್ತೇನೆ. ಪ್ರಸ್ತುತ ನಾನು ಹರಳಕಟ್ಟೆ ಗ್ರಾಮದಲ್ಲಿ ವಾಸವಾಗಿದ್ದೇನೆ. ನನ್ನ ತಂದೆಗೆ ಇಬ್ಬರು ಮಕ್ಕಳು ನಾನು ಮತ್ತು ನನ್ನ ತಮ್ಮನಾದ ಪ್ರತಿವಾದಿ ನಂ 1(ಬಿ)/ಪ್ರಸನ್ನ. ಸದರಿ ಪ್ರಸನ್ನರವರು ಸಹ ಹರಳಕಟ್ಟ ಗ್ರಾಮದಲ್ಲಿ ವಾಸವಿದ್ದಾರೆ. ನನ್ನ ತಾಯಿಯಾದ ಪ್ರತಿವಾದಿ ನಂ 1(ಎ) ಲಲಿತಮ್ಮನವರು ಮತ್ತು ಪ್ರಸನ್ನರವರು ಒಟ್ಟಾಗಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಒಟ್ಟು ಕುಟುಂಬದಲ್ಲಿ ಎಷ್ಟು ಆಸ್ತಿಗಳಿದ್ದವು ಮತ್ತು ಯಾವ ಯಾವ ಆಸ್ತಿಗಳಿದ್ದವು ಎಂದು ನನಗೆ ಹೇಳಲಾಗುವುದಿಲ್ಲ ಮತ್ತು ಎಷ್ಟು ವಿಸ್ತೀರ್ಣ ಇತ್ತು ಎಂದು ನನಗೆ ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಕುಟುಂಬಕ್ಕೆ ಒಟ್ಟು 4 ಆಸ್ತಿಗಳಿತ್ತು ಎಂದು ನುಡಿಯುತ್ತಾರೆ. ದಾವಾಸ್ತಿಗಳಾದ ರೀ.ಸರ್ವೆ ನಂ 89/1ಪಿ1 ಮತ್ತು ರೀ.ಸರ್ವೆ ನಂ 90/3ಪಿ1ರ ಆಸ್ತಿಗಳನ್ನು ನನ್ನ ತಂದೆ ಖರೀದಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಹಾಗಾಗಿ ಸದರಿ ಆಸ್ತಿಗಳು ನನ್ನ ತಂದೆಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನನ್ನ ತಾತನಿಂದ ಬಂತು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು ನನ್ನ ತಾತನಿಂದ ನನ್ನತಂದೆಗೆ ಬಂದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ದಾವಾಸ್ತಿಗಳನ್ನು ನನ್ನ ತಂದೆ ಸ್ವಯಾರ್ಜಿತವಾಗಿ ಖರೀದಿಸಿದ್ದರು ಸಹ ಅವು ಪಿತ್ರಾರ್ಜಿತ ಆಸ್ತಿಗಳು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾಸ್ತಿಗೆ ಸಂಬಂಧಿಸಿದಂತೆ ವಾದಿ ಹಾಜರುಪಡಿಸಿರುವ ನಿಪಿ-5 ಮತ್ತು 6 ರ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಸದರಿ ಪಹಣಿ ನನ್ನ ತಂದೆಯ ಹೆಸರಿನಲ್ಲಿ ಮುಂದುವರೆಯುತ್ತಿದೆ ಎಂಬ ಬಗ್ಗೆ ನಾನು ಪಹಣಿಯನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಈಗ ತಮ್ಮ ಪರವಾಗಿ ಹಾಜರುಪಡಿಸಿದ ದಾಖಲಾತಿಗಳ ಪಟ್ಟಿಯನ್ನು ತೋರಿಸಲಾಗಿ ಸದರಿ ದಾಖಲೆಗಳಲ್ಲಿ ತಾನು ಹೇಳಿದಂತಹ ಪಹಣಿ ಇಲ್ಲದೆ ಇರುವುದನ್ನು ನೋಡಿ ಖಚಿತಪಡಿಸಿಕೊಂಡಿರುತ್ತಾರೆ. ಸದರಿ ತಮ್ಮ ಪರವಾಗಿ ನಿಶಾನೆಗೊಳಪಟ್ಟ ದಾಖಲೆಗಳನ್ನು ನೋಡಿ ಸಾಕ್ಷಿ ಸದರಿ ದಾಖಲೆಗಳು ಸುಳ್ಳು ಎಂದು

ನುಡಿಯುತ್ತಾರೆ. ವಾದಿ ಈ ದಾವೆ ಹೂಡಿದ ನಂತರ ನ್ಯಾಯಾಲಯದಿಂದ ದಾವಾ ಸಮನ್ಸ್ ಜಾರಿಯಾದ ಸಮಯದಲ್ಲಿ ನನ್ನ ತಂದೆಯಾದ ಶಿವಲಿಂಗಪ್ಪನವರು ಜೀವಂತವಿದ್ದರು ಎಂದರೆ ಸರಿ. ನನ್ನ ತಂದೆಗೆ ಮತ್ತು ಪ್ರತಿವಾದಿ ನಂ 1(ಬಿ) ರವರಿಗೆ ಸಮನ್ಸ್ ಜಾರಿಯಾದ ತರುವಾಯ ಸದರಿಯವರು ನ್ಯಾಯಾಲಯಕ್ಕೆ ಹಾಜರಾಗಿ ಯಾವುದೇ ತಕರಾರನ್ನು ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಂದೆ ಕ್ಯಾನ್ಸರ್ ಪೀಡಿತರಾದ ಕಾರಣ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಕ್ಯಾನ್ಸರ್ ಕಾಯಿಲೆ ಇದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ. ಸಾಕ್ಷಿಗೆ ಈಗ ತಮ್ಮ ಪರವಾಗಿ ಹಾಜರುಪಡಿಸಿದ ದಾಖಲಾತಿಗಳ ಪಟ್ಟಿಯನ್ನು ತೋರಿಸಲಾಗಿ ಸದರಿ ದಾಖಲೆಗಳಲ್ಲಿ ತಾನು ಹೇಳಿದಂತಹ ನನ್ನತ ತಂದೆಗೆ ಸಂಬಂಧಿಸಿದ ಯಾವುದೇ ವೈದ್ಯಕೀಯ ದಾಖಲೆ  ಇಲ್ಲದೆ ಇರುವುದನ್ನು ನೋಡಿ ಖಚಿತಪಡಿಸಿಕೊಂಡಿರುತ್ತಾರೆ.

ನನ್ನ ತಂದೆ ಪ್ರಸ್ತುತ ದಾವೆಗೆ ಯಾವುದೇ ತಕರಾರನ್ನು ಸಲ್ಲಿಸದ ಕಾರಣ ಈ ದಾವೆ ವಾದಿಯ ಪರವಾಗಿ ಡಿಕ್ರಿಯಾಗಿತ್ತು  ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಸದರಿ ಡಿಕ್ರಿಯನ್ನು ಪ್ರಶ್ನಿಸಿ ಈ ದಾವೆಯ ಪುನರ್ ಸ್ಥಾಪನೆಗಾಗಿ ನಾನು ಅರ್ಜಿಯನ್ನು ಸಲ್ಲಿಸಿದ್ದೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯ ಅದೇಶದ ತರುವಾಯ ಈ ದಾವೆಯನ್ನು ಪುನರ್ ಸ್ಥಾಪನೆ ಮಾಡಲಾಗಿದೆ ಎಂದರೆ ಸರಿ.

ಈ ದಾವೆಗೆ ತಕರಾರನ್ನು ಸಲ್ಲಿಸಲು ಪುನರ್ ಸ್ಥಾಪನೆಯ ನಂತರ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ.  ನಾನು ನನ್ನ ತಕರಾರಿನಲ್ಲಿ ಉಲ್ಲೇಖಿಸಿರುವಂತೆ ನನ್ನ ತಂದೆ ಮಂಜಪ್ಪರವರಿಂದ ಹಣವನ್ನು ಪಡೆದಿದ್ದು ಸದರಿ ಮಂಜಪ್ಪರವರುನು ಈ ದಾವೆಯಲ್ಲಿ ಪಕ್ಷಗಾರರಾಗಿದ್ದಾರೆಯೇ ಎಂದರೆ ಸಾಕ್ಷಿ ಸದರಿ ಮಂಜಪ್ಪ ತನ್ನ ಮಗಳಾದ ವಿಶಾಲರವರ ಮುಖಾಂತರ ಈ ದಾವೆ ಹೂಡಿದ್ದಾರೆ ಎಂದು ನುಡಿಯುತ್ತಾರೆ. 2013ನೇ ಸಾಲಿನಲ್ಲಿ ನಮ್ಮ ತಂದೆ ಸದರಿ ಮಂಜಪ್ಪರವರಿಂದ ಹಣವನ್ನು ಪಡೆಯುವ ಸಮಯಕ್ಕೆ ಯಾರು ಹಾಜರಿದ್ದರು ಎಂದರೆ ಸಾಕ್ಷಿ ನನ್ನ ತಮ್ಮನಾದ ಪ್ರಸನ್ನ ಮತ್ತು ನನ್ನ ತಂದೆ ಇಬ್ಬರು ಹಾಜರಿದ್ದರು ಎಂದು ನುಡಿಯುತ್ತಾರೆ. ನಮ್ಮ ತಂದೆ ಸದರಿ ಸಾಲವನ್ನು ಪಡೆದ ವಿಚಾರ ನನಗೆ 2015ರಲ್ಲಿ ತಿಳಿದಿರುತ್ತದೆ. ಸದರಿ ವಿಚಾರವನ್ನು ನನ್ನ

ತಂದೆಯೇ ನನಗೆ ತಿಳಿಸಿರುತ್ತಾರೆ. ನನ್ನ ತಂದೆಗೆ ಈ ದಾವೆಯ ನೋಟಿಸು ಜಾರಿಯಾದ ತರುವಾಯ ತಕರಾರನ್ನು ಸಲ್ಲಿಸಿ ಸದರಿ ಸಂಗತಿಗಳನ್ನು ನಮೂದಿಸಲು ಯಾವುದಾದರೂ ತೊಂದರೆಯಿತ್ತೆ ಎಂದರೆ ಸಾಕ್ಷಿ ನನ್ನ ತಂದೆ ಕ್ಯಾನ್ಸರ್ ಪೀಡಿತರಾದ ಕಾರಣ ಅವರು ಸಲ್ಲಿಸಲಿಸಿಲ್ಲ ಎಂದು ನುಡಿಯುತ್ತಾರ. ನನ್ನ ತಂದೆ ಕ್ಯಾನ್ಸರ್ ಪೀಡಿತರಾಗಿದ್ದ ವಿಚಾರವನ್ನು ನನ್ನ ತಕರಾರಿನಲ್ಲಿ ಅಗಲಿ, ಅಥವಾ ನನ್ನ ಮುಹ್ಯ ವಿಚಾರಣಾ ಪ್ರ.ಪತ್ರದಲ್ಲಿ ನಮೂಸಿರುವುದಿಲ್ಲ. ನನ್ನ ತಂದೆಗೆ ಯಾವುದೇ ಕಾಯಿಲೆ ಇಲ್ಲದೆ ಇದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ನನ್ನ ತಂದೆಗೆ 4 ಎಕರೆ ಅಡಿಕೆ ತೋಟವಿತ್ತು. ಸದರಿಯವರಿಗೆ ವಾರ್ಷಿಕ ಎಷ್ಟು ವರಮಾನವಿತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. 2013ರಲ್ಲಿ ನನ್ನ ತಂದೆ ಯಾವ ವಿಚಾರವಾಗಿ ಸಾಲ ಪಡೆದಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ, ಹಾಗಾಗಿ ನಾನು ನನ್ನ ತಕರಾರಿನಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರ.ಪತ್ರದಲ್ಲಿ ಸದರಿ ಸಾಲದ ಉದ್ದೇಶವನ್ನು ನಮೂದಿಸಿಲ್ಲ ಎಂದರೆ ಸರಿ. ವಾದಿಗೆ ನನ್ನ ತಂದೆ ಮತ್ತು ಪ್ರತಿವಾದಿ ನಂ 1(ಬಿ) ರವರು ನಿಪಿ-1ರಂತೆ ಕ್ರಯಕರಾರು ಪತ್ರವನ್ನು ಬರೆದುಕೊಟ್ಟಿರುವ ಸಂಗತಿಯನ್ನು ಮರೆಮಾಚುವ ಉದ್ದೇಶದಿಂದ ಸಾಲ ಪಡೆದಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಸದರಿ ನಿಪಿ-1ನ್ನು ಸುಳ್ಳು ಸೃಷ್ಟಿ ಮಾಡಿರುವ ಬಗ್ಗೆ ನನ್ನ ತಂದೆಗೆ 2015ರಲ್ಲಿ ಗೊತ್ತಾಗಿರುತ್ತದೆ. ನನ್ನ ತಂದೆ ಸದರಿ ನಿಪಿ-1ರ ವಿರುದ್ದ ಮೋಸ ಮಾಡಿ ಕರಾರುಪತ್ರವನ್ನು ಮಾಡಿಕೊಂಡಿರುವ ಕುರಿತು ವಾದಿಯ ವಿರುದ್ದ ಯಾವುದೇ ದೂರನ್ನಾಗಲಿ ಅಥವಾ ಕಾನೂನು ಕ್ರಮವನ್ನಾಗಲಿ ತೆಗೆದುಕೊಂಡಿರುವುದಿಲ್ಲ. ಹಾಗಾಗಿ ನನ್ನ ತಂದೆ ವಾದಿಗೆ ನಿಪಿ-1 ರಂತೆ ಕ್ರಯಕರಾರು ಪತ್ರವನ್ನು ಬರೆದುಕೊಟ್ಟ ಸಂಗತಿ ಸತ್ಯವಾದ ಕಾರಣ ನನ್ನ ತಂದೆ ಅವರ ವಿರುದ್ದ ಯಾವುದೇ ಕಾನೂನು ಕ್ರಮಕ್ಕೈಗೊಳ್ಳಲಿಲ್ಲ ಎಂದರೆ ಸಾಕ್ಷಿ ಸಾಲಕ್ಕೆ ಆಧಾರ ಎಂದು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1ನ್ನು ಯಾರು ಬರೆದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ನಿಪಿ-1ನ್ನು ನಾನು ನೋಡಿಲ್ಲ ಎಂದರೆ ಸರಿ. ಹಾಗಾಗಿ ನಿಪಿ-1ರಲ್ಲಿ ಬರೆದ ವಿಚಾರಗಳು ಗೊತ್ತಿಲ್ಲ ಎಂದರೆ ಸರಿ. ನನ್ನ ತಮ್ಮನಾದ ಪ್ರತಿವಾದಿ ನಂ 1(ಬಿ) ರವರಿಗೆ ನಿಪಿ-1 ಸುಳ್ಳು ಕರಾರುಪತ್ರ ಎಂದು ಕಾನೂನಾತ್ಮಕ ಕೈಗೊಳ್ಳಲು ಯಾವುದಾದರೂ ತೊಂದರೆಯಿತ್ತೆ ಎಂದರೆ ಸಾಕ್ಷಿ ಯಾವುದೇ ತೊಂದರೆಯಿರಲಿಲ್ಲ ಎಂದು ನುಡಿಯುತ್ತಾರೆ. ಈ ದಾವೆಗೆ ನನ್ನ

ಪ್ರತಿವಾದಿನಂ 1(ಬಿ) ರವರು ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ. ಸದರಿ ಪ್ರತಿವಾದಿ ನಂ 1(ಬಿ) ರವರಿಗೆ ನಿಪಿ-1ನ್ನು ಬರೆದುಕೊಟ್ಟ ವಿಚಾರ ಸತ್ಯವಿರುವ ಕಾರಣ ಸದರಿಯವರು ಈ ದಾವೆಗೆ ಯಾವುದೇ ತಕರಾರನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ಮತ್ತು ತಮ್ಮನಿಗೆ ಮೋಸ ಮಾಡಿ ಆಧಾರ ಪತ್ರವನ್ನು ಕ್ರಯಪತ್ರವನ್ನಾಗಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನಿಪಿ-1 ಸುಳ್ಳು ಸೃಷ್ಟಿ ಎಂದು ನನ್ನ ಗಮನಕ್ಕೆ ಬಂದ ತರುವಾಯವೂ ಸಹ ನಾನು ವಾದಿಯ ವಿರುದ್ದ ನಿಪಿ-1ರ ರದ್ದತಿಗಾಗಿ ಯಾವುದೇ ಕಾನೂನಾತ್ಮಕ ಕ್ರಮವನ್ನು ಕೈ ಗೊಂಡಿರುವುದಿಲ್ಲ. ನನ್ನ ತಂದೆ ಮತ್ತು ನನ್ನ ತಮ್ಮ ರವರು ನಿಪಿ-1ನ್ನು ಬರೆದುಕೊಟ್ಟಿರುವ ಸಂಗತಿ ಸತ್ಯವಿರುವ ಕಾರಣ ನಾವು ವಾದಿಯ ವಿರುದ್ದ ಯಾವುದೇ ಕಾನೂನು ಕ್ರಮವನ್ನು ಕೈಗೊಂಡಿಲ್ಲ ಎಂದರೆ ಸಾಕ್ಷಿ ಸದರಿ ವಿಚಾರ ತಿಳಿದ ತರುವಾಯ ನಾನು ಈ ಪ್ರಕರಣವನ್ನು ನಾನು ನಡೆಸುತ್ತಿದ್ದೆನೆ ಎಂದು ನುಡಿಯುತ್ತಾರೆ.

ವಾದಿದಾವಾಸ್ತಿಯನ್ನು ಪ್ರತಿವಾದಿ ನಂ 1 ಮತ್ತು 1(ಬಿ) ರವರಿಂದ ನಿಪಿ-1ರಂತೆ ಕರಾರು ಮಾಡಿಕೊಂಡಿದ್ದು ಅದಕ್ಕೆ ಪ್ರತಿಯಾಗಿ ಸದರಿಯವರಿಗೆ 95 ಸಾವಿರ ರೂ.ಗಳನ್ನು ಕ್ರಯ ಮುಂಗಡವಾಗಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1ರ ಪುಟ ಸಂಖ್ಯೆ 4 ರಲ್ಲಿ " ಸದರಿ ಕ್ರಯಕ್ಕೆ ಕೊಟ್ಟ ಸ್ವತ್ತಿಗೆ ಕ್ರಯದಾರರು ಓಡಾಡಲು ಸದರಿ ನಂಬರಿನಲ್ಲಿ ಉಳಿಸಿಕೊಂಡ ಜಮೀನಿನಲ್ಲಿ ಉತ್ತರ ಭಾಗದಲ್ಲಿ 12 ಅಡಿ ದಾರಿಯನ್ನು ಖಾತೆದಾರರು ಉಳಿಸಿಕೊಂಡ ಜಮೀನಿನಲ್ಲಿ ಸದರಿ ಸ್ವತ್ತುಗಳ ಕ್ರಯದಾರರಿಗೆ ಓಡಾಡಲು ದಾರಿಯನ್ನು ಬಿಟ್ಟುಕೊಟ್ಟಿರುತ್ತೆವೆ " ಎಂದು ಉಲ್ಲೇಖಿಸಲಾಗಿದೆ ಎಂದರೆ ಸರಿಯಲ್ಲ. ನನ್ನತಂ ದೆ ದಾವಾಸ್ತಿಗಳನ್ನು ವಾದಿಗೆಕ್ರಯಕ್ಕೆ ಕೊಟ್ಟ ಕಾರಣದಿಂದಲೇ ಸದರಿ ವಿಚಾರವನ್ನು ನಿಪಿ-1ರಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಸದರಿ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ತಕಾರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ನಿಪಿ-1ರ ದಿನಾಂಕದಂದೇ ನನ್ನ ತಂದೆ ವಿಲ್ ನ್ನು ವಾದಿಗೆ ಬರೆದುಕೊಟ್ಟಿರುವ ಸಂಗತಿಯನ್ನು ನನ್ನ ತಂದೆಯೇ ನನಗೆ ತಿಳಿಸಿರುತ್ತಾರೆ. ಸದರಿ ವಿಚಾರವನ್ನು ನನ್ನ ತಂದೆಯವರೇ ತಿಳಿಸಿದ್ದರು ಎಂದು ನನ್ನ ಮುಖ್ಯ ವಿಚಾರಣಾ ಪ್ರ.ತ್ರದಲ್ಲಿ ನನ್ನ ಪ್ರಮಾಣಪತ್ರದಲ್ಲಿ

ನಮೂದಿಸಿರುವುದಿಲ್ಲ. ಸದರಿ ವಿಲ್ ನ ಮೂಲ ಪ್ರತಿ ವಾದಿಯ ಬಳಿಯೇ ಇದೆ ಎಂದು ನನ್ನ ತಂದೆ ಜೀವಂತವಿರುವಾಗಲೇ 2017ರಲ್ಲಿ ನಮಗೆ ತಿಳಿಸಿರುತ್ತಾರೆ.

ನಿಡಿ-2ರ ಸಂಗತಿಗಳನ್ನು ನಾನು ತಿಳಿದುಕೊಂಡಿರುವುದಿಲ್ಲ. ಸದರಿ ನಿಡಿ-2ರಲ್ಲಿ ಉಲ್ಲೇಖವಿರುವಂ ತೆ ಸದರಿ ವಿಲ್ ನ ಮೂಲ ಪ್ರತಿ ರೆವಿನ್ಯೂ ಇಲಾಖೆಯವರ ಬಳಿ ಇದೆ ಎಂದು ಉಲ್ಲೇಖವಿದ್ದು ವಾದಿಗಳ ಬಳಿ ಮೂಲ ಪ್ರತಿ ಇದೆ ಇದೆ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲಲ. ನಿಡಿ-2 ನ್ನು ನನ್ನ ತಂದೆಯೇ ಸೃಷ್ಟಿಸಿರುವ ದಾಖಲಾತಿಯಾಗಿದ್ದು ಅದಕ್ಕೂ ವಾದಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಡಿ-2 ನ್ನು ನನ್ನ ತಂದೆಯೇ ರದ್ದುಮಾಡಿರುವ ಸಂಗತಿಯನ್ನು ನಮ್ಮ ವಕೀಲರು ನಮಗೆ ತಿಳಿಸಿರುತ್ತಾರೆ. ನನ್ನ ತಂದೆಗೆ ವಿಲ್ ನ್ನು ರದ್ದು ಮಾಡಿದ ರೀತಿಯಲ್ಲಿಯೇ ನಿಪಿ-1ನ್ನು ರದ್ದುಮಾಡಲು ಕ್ರಮಕೈಗೊಳ್ಳಲು ಯಾವುದೇ ತೊಂದರೆಯಿರಲಿಲ್ಲ ಎಂದರೆ ಸಾಕ್ಷಿ ಕ್ಯಾನ್ಸರ್ ಇತ್ತು ಎಂದು ನುಡಿಯುತ್ತಾರೆ. ನಿಡಿ-1 ರ ಸಮಯಕ್ಕೆನನ್ನ ತಂದೆ ಅರೋಗ್ಯವಂತರಾಗಿದ್ದರು. ವಾದಿಗೆ ನಿಪಿ-1 ನ್ನು ಬರೆದುಕೊಟಿಪ್ಪಿರುವ ಸಂಗತಿ ಗೊತ್ತಿದ್ದರು ಸಹ ನಿಡಿ-1 ಮತ್ತು 2 ರಂತೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೀರ ಎಂದರೆ ಸರಿಯಲ್ಲ. ವಿಲ್ ರದ್ದತಿಯಾದ ಸಂಗತಿಯನ್ನು ತಕರಾರನ್ನು ಸಲ್ಲಿಸುವ ಸಮಯಕ್ಕೆ ನಾನು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ನನ್ನ ತಂದೆ ವಾದಿಯಿಂದ ಸಾಲ ಪಡೆದ ವಿಚಾರವಾಗಿ ಯಾವುದೇ ದಾಖಲೆಗಳು ಇರುವುದಿಲ್ಲ.ನನ್ನ ತಂದೆ ವಾದಿಯಿಂದ ಯಾವುದೇ ಸಾಲ ಪಡೆಯದೆ ಇದ್ದರು ಸಹ ಈ ದಾವೆಗಾಗಿ ಸುಳ್ಳು ಸಂಗತಿಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೆವೆ ಎಂದರೆ ಸರಿಯಲ್ಲ. ನನ್ನ ತಂದೆ ವಾದಿಯಿಂದ ಸಾಲ ಪಡೆಯದೆ ಇರುವ ಕಾರಣ ಅದಕ್ಕೆ ಸಂಬಂಧಪಟ್ಟ ಯಾವುದೇ ದಾಖಲೆಗಳು ನಮ್ಮ ಬಳಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಾಖಲೆಗಳು ನನ್ನ ಬಳಿ ಇದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನನಗೇನು ತೊಂದರೆಯಿಲ್ಲ. ವಾದಿ ನನ್ನ ತಂದೆ ಮತ್ತು ನನ್ನ ತಮ್ಮನಿಗೆ ಕ್ರಯಪತ್ರ ಬರೆದುಕೊಡುವಂತೆ ಸಕಾಷ್ಟು ಬಾರಿ ಮೌಖಿಕವಾಗಿ ಕೇಳಿದ್ದರು ಸಹ ನನ್ನತಂದೆ ಮತ್ತು ನನ್ನ ತಮ್ಮ ಅದನ್ನು ನೋಟಿಸು ಬರೆದುಕೊಡದ ಕಾರಣ ಅವರಿಗೆ ನಿಪಿ-2 ರಂತೆ ನೋಟಿಸನ್ನು ಜಾರಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ನೋಟಿಸು/ನಿಪಿ-2 ಜಾರಿಯಾದ ತರುವಾಯವೂ ಸಹ ನಾವು ವಾದಿಗೆ ಯಾವುದೇ ಮರುತ್ತರವನ್ನಾಗಲಿ ಅಥವಾ ನೋಟಿಸನಲ್ಲಿನ ಬೇಡಿಕೆಯನ್ನಾಗಲಿ ಈಡೇರಿಸಲು ಪ್ರಯತ್ನಿಸಲಿಲ್ಲ

ಎಂದರೆ ಸರಿ. ಹಾಗಾಗಿ ನಾವುವಾದಿಗೆ ಕ್ರಯಪತ್ರವನ್ನು ಬರೆದುಕೊಡದ ಕಾರಣ ವಾದಿ ನಮ್ಮ ವಿರುದ್ದ ಈ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ತಮ್ಮ ದಾವಾಸ್ತಿಯನ್ನು ನಿಪಿ-1ರಂತೆ ವಾದಿಗೆ ಕರಾರುಮಾಡಿಕೊಟ್ಟಿದ್ದರು ಸಹ ನಾನು ಸುಳ್ಳು ತಕರಾರು ತಲ್ಲಿಸಿ ಸುಳುಳ ಸಾಕ್ಷಿ ನುಡಿಯುತಿತದ್ದೆನೆ ಎಂದರೆ ಸರಿಯಲ್ಲ. ನಾನು ನನ್ನ ಅನುಕೂಲಕ್ಕೆ ತಕ್ಕಂತೆ ತಕರಾರನ್ನು ಸಲ್ಲಿಸಿ ವಾದಿಗೆ ತೊಂದರೆಕೊಡುತ್ತಿದ್ದೆನೆ ಎಂದರೆ ಸರಿಯಲ್ಲ. ನಿಡಿ-1 ಮತ್ತು 2 ವಾದಿಗೆ ಸಂಬಂಧಿಸಿಲ್ಲದೆ ಇದ್ದರು ಸಹ ವಾದಿಯೇ ಸದರಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ವಾದಿಯ ತಂದೆಯಿಂದ ಪಡೆದ 45 ಸಾವಿರ ರೂಪಾಯಿಗಳನ್ನು ನನ್ನ ತಂದೆ ಈಗಲೂ ತೀರಿಸಿಲ್ಲ. ವಾದಿ ಕ್ರಯಕರಾರಿನ ಬಾಕಿ ಉಳಿದ ಹಣವಾದ 5 ಸಾವಿರ ರೂ.ಗಳನ್ನು ಕೊಟ್ಟು ಕ್ರಯಪತ್ರವನ್ನು ನೊಂದಾಯಿಸಿಕೊಳ್ಳಲು ಈಗಲೂ ಸಹ ಸಿದ್ದರಿದ್ದಾರೆ ಎಂದರೆ ಸಾಕ್ಷಿ ನಾವು ಸಿದ್ದರಿಲ್ಲ ಎಂದು ನುಡಿಯುತ್ತಾರೆ. ವಾದಿಯ ತಂದೆಗೂ ಮತ್ತು ನಿಪಿ-1 ಕ್ಕೂ ಯಾವುದೇ ರೀತಿ ಸಂಬಂಧವಿಲ್ಲದೆ ಇದ್ದರು ಸಹ ವಾದಿಯ ತಂದೆಯಿಂದ ಸಾಲ ಪಡೆದಿರುವುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ,**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.